ಪರಾಭವ ಸಂವತ್ಸರ ವಸಂತ ಋತು ಏಪ್ರಿಲ್-2026

# ವಿಪ್ರಬಂಧು

ತ್ರೈಮಾಸಿಕ ಪತ್ರಿಕೆ - ಸಂಚಿಕೆ 22 - ಪುಟಗಳು 20





॥ ಶಂಕರಂ ಶಂಕರಾಚಾರ್ಯಂ ಶೇಷಂ ರಾಮಾನುಜಂ ಮುನಿಂ ।
ವಾಯುಂ ಚ ಮಧ್ವಮಾಚಾರ್ಯಂ ಆಚಾರ್ಯತ್ರಯಮಾಶ್ರಯೇ ॥

***BOOK POST***

## ಹೆಚ್.ಎಸ್.ಆರ್. ಬಡಾವಣೆ ಬ್ರಾಹ್ಮಣ ಸಂಘ (ರಿ)

## H.S.R. BADAVANE BRAHMANA SANGHA (R)

(SOR/BLU/DR/816/2009-10/31-10-2009)


With Best Compliments from:
SHASTRY'S BAKERY AND SWEETS
ಶಾಸ್ತ್ರೀಸ್ ಬೇಕರಿ ಮತ್ತು ಸಿಹಿ ತಿಂಡಿಗಳು
# 714/2, 7th Block, K.R. Road, Jayanagar, Bangalore - 560 070
ಸಂತಸದ ಸುದ್ದಿ ನೂತನವಾಗಿ ಬನಶಂಕರಿ ಶಾಖೆ ತೆರೆಯಲಾಗಿದೆ
70, 46ನೇ ಅಡ್ಡರಸ್ತೆ, ಬನಶಂಕರಿ ಬಸ್ ನಿಲ್ದಾಣದ ಹತ್ತಿರ ಬನಶಂಕರಿ, ಬೆಂಗಳೂರು
ಸಾರ್ವಜನಿಕರಿಗೆ 33 ವರ್ಷಗಳಿಂದ ಶುದ್ಧ ಪದಾರ್ಥಗಳ ಅವಿರತ ಸೇವೆ. ಎಲ್ಲಾ ಶುಭ ಸಮಾರಂಭಗಳಿಗೆ ಶುದ್ಧವಾಗಿ, ರುಚಿಯಾಗಿ ಬೇಕರಿ ಹಾಗೂ ಸಿಹಿ ತಿನಿಸುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಅವಶ್ಯಕತೆಗೆ ಅನುಗುಣವಾಗಿ ತಮ್ಮಲ್ಲಿಗೆ ತಲುಪಿಸಲಾಗುತ್ತದೆ.
ಪ್ರೊ : ಸಂತೇಶಿವರ ಜಯರಾಮು ಮತ್ತು ಸಹೋದರರು
ದೂರವಾಣಿ : 2676 4599
94486 85061, 94803 91152
99869 28281


With Best Compliments From
ರಕ್ಷಿತ್ ಆರೋಗ್ಯ ಮತ್ತು ಸಲಹಾ ಕೇಂದ್ರ
SERVING the humanity since 31 years......
RAKSHIT HEALTH
AND COUNSELLING CENTER
" Certified Diabetes Counsellors "
1. #7, (76/1), 7th Cross, 27th Main, 1st Sector, HSR Layout, BANGALORE-560 102
Dr. B.S. LAKSHMI
BAMS (Ay), BAMS (Integrated)
CNCC (Childcare and Nutrition)
Mobile: 98455 18758
Dr. AMARNATH T.S.
BSAM (Ay), BAMS (Integrated)
PGDHR (Human Rights)
EMBA (Marketing)
Mobile: 98452 59809
Certificate
PRIME TIME
GLOBAL HEALTHCARE EXCELLENCE AWARDS 2013
Rakshit Health and Counselling Centre

# ಅಧ್ಯಕ್ಷರ ನುಡಿ

ಸಂಘದ ಎಲ್ಲಾ ವಿಪ್ರ ಬಂಧುಗಳಿಗೆ ನಮಸ್ಕಾರಗಳು.

ನಮ್ಮ ಸಂಘವು ಹಿಂದೂ ಪಂಚಾಂಗವನ್ನು ಗಮನದಲ್ಲಿಟ್ಟುಕೊಂಡು ಮುದ್ರಿಸುವ ದಿನದರ್ಶಿಯನ್ನು, ಹೊಸ ವರ್ಷದ ಆರಂಭಕ್ಕೂ ಮೊದಲೇ ದಿನಾಂಕ 27/12/2025 ರಂದು ವೇದಗುರುಗಳಾದ ವಿದ್ವಾನ್ ರಾಮಕೃಷ್ಣ ಭಟ್ ರವರು ಬಿಡುಗಡೆ ಮಾಡಿದರು. ಸಂಘದ ಕಾರ್ಯಕರ್ತರ ಸಕ್ರಿಯ ಭಾಗವಹಿಸುವಿಕೆಯಿಂದ, 2026 ರ ದಿನದರ್ಶಿಯನ್ನು ಎಲ್ಲಾ ಸದಸ್ಯರಿಗೆ, ಜಾಹಿರಾತುದಾರರಿಗೆ, ಸರ್ಕಾರಿ ಕಚೇರಿಗಳಿಗೆ ಹಾಗೂ ಹೆಚ್.ಎಸ್.ಆರ್ ಬಡಾವಣೆಯ ಸುತ್ತಮುತ್ತ ಇರುವ ದೇವಸ್ಥಾನಗಳಿಗೆ ವಿತರಿಸಲಾಯಿತು. ಈ ಕೆಲಸಕ್ಕೆ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು.

ಸಂಘದ ಕಚೇರಿ ಗಾಯತ್ರಿ ಭವನದಲ್ಲಿ, ರಥ ಸಪ್ತಮಿ, ಮಧ್ವನವಮಿ ಹಾಗೂ ಮಹಾಶಿವರಾತ್ರಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಪ್ರತಿ ವರ್ಷದಂತೆ ಈ ವರ್ಷವೂ ಮಾಘಸ್ನಾನದ ಪ್ರಯುಕ್ತ ಎಸ್.ಎಲ್.ಎನ್ ವೇದಪಾಠಶಾಲೆಯ ವೇದಬಂಧುಗಳು, ಫೆಬ್ರವರಿ ತಿಂಗಳ 7 ಮತ್ತು 8 ನೇ ದಿನಾಂಕದಂದು ಹೊರನಾಡು, ಶೃಂಗೇರಿ, ಶಕಟಪುರ ಮತ್ತು ಹರಿಹರಪುರಗಳಿಗೆ ಪ್ರವಾಸ ಮಾಡಿ ಶಕಟಪುರದಲ್ಲಿ ಮಾಘಸ್ನಾನವನ್ನು ಮಾಡಿದರು.

ಬ್ರಾಹ್ಮಣ ಸಂಘದ ಎಲ್ಲಾ ಸದಸ್ಯರುಗಳಿಗೆ ಗುರುತಿನ ಚೀಟಿಯನ್ನು ನೀಡಲು ತೀರ್ಮಾನಿಸಿದ್ದು, ಶೀಘ್ರವೇ ಗುರುತಿನ ಚೀಟಿಯನ್ನು ವಿತರಿಸಲಾಗುವುದು.

ಇತ್ತೀಚೆಗೆ ಗಾಯತ್ರೀ ಭವನದಲ್ಲಿ ವಿಪ್ರ ಸದಸ್ಯರು ಮತ್ತು ಕುಟುಂಬ ವರ್ಗದವರಿಗಾಗಿ ಭಜನೆಯ ತರಗತಿಗಳನ್ನು ಪ್ರತಿ ಶನಿವಾರ ಪ್ರಾರಂಭಿಸಲಾಗಿದೆ. ವೇದಬಂಧುಗಳ ಕೋರಿಕೆ ಮೇರೆಗೆ 28/02/2026 ರಿಂದ ಪ್ರತಿ ಶನಿವಾರ ಮತ್ತು ಭಾನುವಾರ ಬೆಳಿಗ್ಗೆ ವೇದಪಾಠದ ನಂತರ ಶ್ರೀಮದ್ಭಗವದ್ಗೀತೆಯ ಪ್ರವಚನವನ್ನು ವಿದ್ವಾನ್ ಶ್ರೀ ರಾಮಕೃಷ್ಣ ಭಟ್ ರವರು ನೀಡುತ್ತಿದ್ದಾರೆ. ಇವುಗಳ ಪ್ರಯೋಜನವನ್ನು ಬಡಾವಣೆಯ ಬ್ರಾಹ್ಮಣ ಸಮುದಾಯ ಪಡೆದುಕೊಳ್ಳಬೇಕೆಂದು ಕೋರಲಾಗಿದೆ.

ಕಳೆದ ವರ್ಷದಂತೆ ಈ ವರ್ಷವೂ ಸಹ ಮಕ್ಕಳಿಗೆ ಬೇಸಿಗೆ ಶಿಬಿರವನ್ನು ಆಯೋಜಿಸಲಾಗುವುದು. ಇದಲ್ಲದೇ ಜಾಗತಿಕ ಶಾಂತಿ ಮತ್ತು ಸಮೃದ್ಧಿಗಾಗಿ ಸಾರ್ವಜನಿಕವಾಗಿ ಮಂಗಳಕರ ಶ್ರೀ ಲಲಿತಾ ಸಹಸ್ರನಾಮ, ಕುಂಕುಮಾರ್ಚನೆ ಹಾಗೂ ಶ್ರೀ ಲಲಿತಾ ಹೋಮವನ್ನು ಆಯೋಜಿಸಲು ತೀರ್ಮಾನಿಸಲಾಗಿದೆ.ಮೇಲ್ಕಂಡ ಎಲ್ಲಾ ಕಾರ್ಯಕ್ರಮಗಳಿಗೂ ತಮ್ಮೆಲ್ಲರ ಪೂರ್ಣ ಬೆಂಬಲ ಹಾಗೂ ಸಹಕಾರವನ್ನು ನಿರೀಕ್ಷಿಸುತ್ತೇನೆ..

ಸಂಘದಲ್ಲಿ ಹಾಲೀ 830 ಸದಸ್ಯರಿದ್ದು ಸದಸ್ಯತ್ವವನ್ನು ಒಂದು ಸಾವಿರಕ್ಕೆ ಹೆಚ್ಚಿಸಲು ತಮ್ಮೆಲ್ಲರ ಸಹಕಾರ ಅಗತ್ಯವೆಂದು ಹೇಳಿ ಮುಂಬರುವ ಹಬ್ಬ ಹರಿದಿನಗಳಿಗೆ ತಮ್ಮೆಲ್ಲರಿಗೂ ಆರೋಗ್ಯ, ಸುಖ, ಶಾಂತಿ, ನೆಮ್ಮದಿ ಹಾಗೂ ಸಂತೋಷವನ್ನು ನೀಡಲೆಂದು ದೇವರನ್ನು ಪ್ರಾರ್ಥಿಸುತ್ತೇನೆ.

ವಂದನೆಗಳೊಂದಿಗೆ
**ರಮೇಶ್.ಎ**

## EXECUTIVE COMMITTEE

**PRESIDENT**
Ramesh A : 90084 58078

**VICE PRESIDENTS**
Narasimhaiah V : 94490 28618
Prabhakar H C : 98860 35210

**SECRETARY**
Narasimha Murthy A R : 98445 68839

**JOINT SECRETARIES**
Dr Shyam Sundar G : 94486 76442
Anantha M S : 99868 25761
Raghunath N : 98807 19764
Govindraja Achar : 98802 98031

**TREASURER**
Ajeya Krishna K R : 99800 10021

**EC MEMBERS**
Anantha Ramu S : 94480 55193
Gururaja Rao S : 94480 19249
Srinivasa S V : 70907 09946
Harish Kumar K R : 99452 73136
Kousalendra S A P : 94814 87304
Subramanya H C : 99024 83415
Chethan N : 98805 09396
S K L N Prasanna : 98863 94463
Raghavendra R : 94485 58482
Sindu Priyadarshini A : 98806 86492
Divya Vinay : 96110 80044

**ADVISORS**
Ramaswamy K : 99009 48237
Subbaramaiah C N : 94481 89695
Sridhara Rao H : 96322 11611
Natesh G S : 94487 77770
Balaprabha Karanth : 99458 02609
Krishna Murthy K S : 99809 22776
Manoj Karantha K : 88804 43064
Mohan Kumar K : 94484 80472
Sudhindra Bhat : 98451 03951
Murali V R : 98440 33971

**Viprabandhu Editorial Committee**
Sridhar Rao H. 9632211611
Nagalakshmi 9741044599
Natesh G.S. 9448777770
Narasimhaiah V. 9449028618
hsr.viprabandhu@gmail.com


# ಕಾರ್ಯದರ್ಶಿ ವರದಿ

ಎಲ್ಲರಿಗೂ ನಮಸ್ಕಾರಗಳು.

ತಮಗೆಲ್ಲರಿಗೂ ಶ್ರೀ ಪರಾಭವ ಸಂವತ್ಸರ ವಿಜಯ, ಆರೋಗ್ಯ, ಐಶ್ವರ್ಯ ಹಾಗೂ ನೆಮ್ಮದಿ ನೀಡಲಿ ಎಂದು ಪ್ರಾರ್ಥಿಸುತ್ತೇನೆ.

ಈ ತ್ರೈಮಾಸಿಕದಲ್ಲಿ ಬರುವ ಸೌರಮಾನ ಯುಗಾದಿ, ಶ್ರೀ ಶಂಕರ ಜಯಂತಿ, ಶ್ರೀ ರಾಮಾನುಜಾಚಾರ್ಯ ತಿರುನಕ್ಷತ್ರ ಹಾಗೂ ನರಸಿಂಹ ಜಯಂತಿ ಹಬ್ಬಗಳು ತಮಗೆಲ್ಲ ನವ ಉಲ್ಲಾಸ, ಉತ್ಸಾಹ ತರಲೆಂದು ಪ್ರಾರ್ಥಿಸಿ , ಹಿಂದಿನ ತ್ರೈಮಾಸಿಕದಲ್ಲಿ ನಡೆದ ಕಾರ್ಯಕ್ರಮಗಳ ವರದಿಯನ್ನು ನೀಡುತ್ತಿದ್ದೇನೆ.

- ದಿನಾಂಕ 27/01/202 ರಂದು ಸಂಘದ ಕಚೇರಿ ಗಾಯತ್ರಿ ಭವನದಲ್ಲಿ ಮಧ್ವನವಮಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಉತ್ತರಾಧಿ ಮಠದಿಂದ ಆಗಮಿಸಿದ್ದ ಆಚಾರ್ಯರು ನೆರವೇರಿಸಿದ ಪೂಜೆ , ಪ್ರವಚನಗಳಲ್ಲಿ ಸುಮಾರು 70 ಜನರು ಭಾಗಿಗಳಾಗಿ ಸಂತಸಗೊಂಡರು.
- ಶಿವರಾತ್ರಿ ಪ್ರಯುಕ್ತ , ದಿನಾಂಕ 15/02/2026 ರಂದು , ಗಾಯತ್ರಿ ಭವನದಲ್ಲಿ ವೇದಗುರು ಶ್ರೀ ರಾಮಕೃಷ್ಣಭಟ್ಟರ ನೇತೃತ್ವದಲ್ಲಿ ರುದ್ರಾಭಿಷೇಕ ಸಹಿತ ಶಿವಪೂಜೆಯು ನೆರವೇರಿತು. ಬೆಳಗ್ಗೆ 7.00 ರಿಂದ 9.30 ರವರೆಗೆ ನಡೆದ ಕಾರ್ಯಕ್ರಮಕ್ಕೆ ಸುಮಾರು 8 5 ಜನರು ಆಗಮಿಸಿದ್ದು, ಈಶ್ವರಾನುಗ್ರಹಕ್ಕೆ ಪಾತ್ರರಾದರು.
- ನಿಮಗೆಲ್ಲಾ ತಿಳಿದಿರುವಂತೆ ಸಂಘದಲ್ಲಿ ಈಗಾಗಲೇ ವೇದ ಪಾಠ, ಉಚಿತ ಯೋಗಾಭ್ಯಾಸ ತರಗತಿ ಹಾಗೂ ಉಚಿತ ಕೀರ್ತನೆ ಹಾಗೂ ಭಜನೆ ತರಗತಿಗಳು ನಡೆಯುತ್ತಿವೆ. ಎಲ್ಲರೂ ಇದರ ಸದುಪಯೋಗ ಪಡೆಯಬೇಕಾಗಿ ಮತ್ತೊಮ್ಮೆ ವಿನಂತಿಸಲಾಗಿದೆ.
- ಸಂಘದ ಕಚೇರಿಯು ಪ್ರತಿ ಶನಿವಾರ ಸಂಜೆ 4 . 3 0 ಗಂಟೆಯಿಂದ 6.30 ಗಂಟೆಯವರೆಗೆ ತೆರೆದಿರುತ್ತದೆ. ಸಂಘದ ಸದಸ್ಯರು ಈ ಸಮಯದಲ್ಲಿ ಕಚೇರಿಗೆ ಬಂದು ಅಂದು ಕಚೇರಿಯಲ್ಲಿರುವ ಕಾರ್ಯಕಾರಿಣಿ ಸಮಿತಿಯ ಸದಸ್ಯರನ್ನು ಭೇಟಿ ಮಾಡಿ ಚರ್ಚಿಸಬಹುದು.

- ಸಂಘವು ಇನ್ನೂ ಹೆಚ್ಚು ಜನೋಪಯೋಗಿ ಕಾರ್ಯಕ್ರಮಗಳನ್ನು ನಡೆಸಲು ನಿರ್ಧರಿಸಿದೆ. ಈ ನಿಟ್ಟಿನಲ್ಲಿ ಈಗಾಗಲೇ Trustwell hospital, JC Road, Bangalore ಇವರೊಡನೆ ಸಂಘದ ಸದಸ್ಯರುಗಳಿಗೆ ರಿಯಾಯಿತಿ ದರದಲ್ಲಿ ಚಿಕಿತ್ಸೆ ನೀಡುವ ಬಗ್ಗೆ ಒಡಂಬಡಿಕೆ ಮಾಡಿಕೊಳ್ಳಲಾಗುತ್ತಿದೆ. ಮುಂದಿನ ದಿನಗಳಲ್ಲಿ ಇದರ ಬಗ್ಗೆ ಹೆಚ್ಚಿನ ವಿಷಯವನ್ನು ನಿಮಗೆಲ್ಲ ತಿಳಿಸಲಾಗುವುದು.

ಕಳೆದ ತ್ರೈಮಾಸಿಕದಲ್ಲಿ ಸಂಘಕ್ಕೆ ಈ ಕೆಳಕಂಡ ಸದಸ್ಯರುಗಳು ಸೇರಿರುತ್ತಾರೆ.

1. ಡಾ ವೆಂಕಟೇಶ್ P. - ಸದಸ್ಯತ್ವ ಸಂಖ್ಯೆ 823
2. ಗೋವರ್ಧನ R. - ಸದಸ್ಯತ್ವ ಸಂಖ್ಯೆ 824
3. A. S. ಶ್ರೀರಾಮ್ - ಸದಸ್ಯತ್ವ ಸಂಖ್ಯೆ 825
4. B. N. ಗಾಯತ್ರಿ - ಸದಸ್ಯತ್ವ ಸಂಖ್ಯೆ 826
5. ನವೀನ್ ವಿ. ಜಹಗೀರದಾರ್ - ಸದಸ್ಯತ್ವ ಸಂಖ್ಯೆ 827
6. ಕುಸುಮಾ K.S. - ಸದಸ್ಯತ್ವ ಸಂಖ್ಯೆ 828
7. ಮುರಳಿ ಮನೋಹರ್ N.K. - ಸದಸ್ಯತ್ವ ಸಂಖ್ಯೆ 829
8. ವಿಶ್ವರತ್ನ ಭಟ್ - ಸದಸ್ಯತ್ವ ಸಂಖ್ಯೆ 830 (ವಿಶೇಷ ಆಹ್ವಾನಿತ)
9. ರಜನಿ ಪ್ರಿಯಾ D. - ಸದಸ್ಯತ್ವ ಸಂಖ್ಯೆ 831
10. ರಾಘವೇಂದ್ರ ಚಾರುದರ್ IPS(ನಿವೃತ್ತ) - ಸದಸ್ಯತ್ವ ಸಂಖ್ಯೆ 832
11. ನವೀನ್ ರಾಜ್ - ಸದಸ್ಯತ್ವ ಸಂಖ್ಯೆ 833
12. ಪ್ರಮೋದ್ ಅರವಿಂದ್ - ಸದಸ್ಯತ್ವ ಸಂಖ್ಯೆ 834
13. ಲಾವಣ್ಯ K. S. - ಸದಸ್ಯತ್ವ ಸಂಖ್ಯೆ 835
14. A. ಶ್ರೀಧರನ್ - ಸದಸ್ಯತ್ವ ಸಂಖ್ಯೆ 836
15. ಲಲಿತಾ ಶ್ರೀಧರನ್ - ಸದಸ್ಯತ್ವ ಸಂಖ್ಯೆ 837
16. B. N. ಪ್ರಸಾದ್ - ಸದಸ್ಯತ್ವ ಸಂಖ್ಯೆ 838
17. ಡಾ. ವಿನಯ ಮೋಹನ್ - ಸದಸ್ಯತ್ವ ಸಂಖ್ಯೆ 839

ಇವರುಗಳನ್ನು ಸಂಘಕ್ಕೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಇವರನ್ನು ಪರಿಚಯಿಸಿದ ಸದಸ್ಯರುಗಳಿಗೆ ಧನ್ಯವಾದಗಳನ್ನು ತಿಳಿಸುತ್ತಿದ್ದೇನೆ.

ಕಾರ್ಯಕಾರಿಣಿ ಸಮಿತಿಯು ನಿಮ್ಮ ಅಮೂಲ್ಯ ಸಹಕಾರ, ಸಲಹೆಗಳನ್ನು ಸದಾ ನಿರೀಕ್ಷಿಸುತ್ತದೆ. ನಿಮ್ಮ ಭರವಸೆಯೇ ನಮಗೆ ಸ್ಫೂರ್ತಿ.

ಇಂತಿ
**ಅ ರಾ ನ ಮೂರ್ತಿ**
ಕಾರ್ಯದರ್ಶಿ

**ಹೆಚ್.ಎಸ್.ಆರ್. ಬಡಾವಣೆ ಬ್ರಾಹ್ಮಣ ಸಂಘ (ರಿ)**

**H.S.R. BADAVANE BRAHMANA SANGHA (R)**

(SOR/BLU/DR/816/2009-10/31-10-2009)

# 56, 4th floor, Gayathri Bhavana, 31st Main, 18th Cross, Sector 2,
HSR Layout, BANGALORE - 560102

Website : www.hsrvipra.co.in. Email : hsr.brahmana@yahoo.com

# MAGHA SNANA: A JOURNEY OF DEVOTION AND GRACE

Magha Snana, the age-old practice of taking holy dip baths in rivers, before sunrise during the Hindu month of Magha (magha masa), is a profoundly traditional, rigorous and spiritually rejuvenating experience for many.

This was my first trip with the HSR Badavane Brahmana Sangha, an unexpected trip but a truly delightful experience.

I was surprised when my husband asked me to join, since he was travelling to Kumbakonam at the same time. I eagerly looked forward to this journey, as I was particularly drawn to the places we were visiting, especially Shakatapura and Hariharapura, which were new to me.

The bus arrived right on time, and the pre-departure pooja set a great tone for the entire trip. The organizers took care of every single detail, from start to finish, making the journey enjoyable, pleasant, and completely non-tiring.

We had divine darshan at the Hornadu Annapoorneshwari Temple, followed by a delicious breakfast at the temple. Visit to Sringeri and soulful Darshan of Sharadamba, followed by a sumptuous lunch, was immensely satisfying. The visit to Sri Shankaracharya statue was another memorable moment.

We then proceeded to Shakatapura, where comfortable rooms were arranged for each one of us , which deserves special mention.

Next morning, much-awaited Magha Maasa Snana and darshan of Sri Venugopala, Sri Narasimha, and Sri Rajarajeshwari— all in one place—were among the major highlights of the trip. The Surya Mandala Stotra and Namaskaram conducted under the guidance of our Guru, Vidwan Sri Ramakrishna Bhat, was truly one of the most enriching experiences

Hariharapura, the final leg of our journey, turned out to be the most special for me.

The moment I entered the temple, I was awe-struck! I felt as though I had stepped into a different world altogether.

That experience has left a lasting and unforgettable impression on my mind.

Once again, we enjoyed a wonderful lunch at Shakatapura and started our return journey. The hot bajjis and coffee at Belur were simply unforgettable. The care and dedication shown by the organizing team— Sri Ramesh, Sri Prabhakar, Sri Narasimayyah, Sri Narayana, and Sri Raghu—were truly commendable.

Last but not least, the entertainment during the bus journey, especially the old melodies sung by Hari, Meera, and Srinivasan, added joy and warmth to the trip. Dropping each of us at our doorstep was indeed a thoughtful and kind gesture. I sincerely thank all the members and friends who made this trip such a memorable one. I look forward to many more such wonderful journeys with the Sangha in the future.

**— Prema Venugopal**



# ದಶ ಮಹಾವಿದ್ಯಾ - ಮಹಾಕಾಳಿಯ ದಶ ಅವತಾರಗಳು


ಭೂಮಿಯ ಮೇಲೆ ಅಧರ್ಮವು ಹೆಚ್ಚಾಗಿ ರಾಕ್ಷಸರ ಕಾಟವು ಎಲ್ಲೆ ಮೀರಿದಾಗ ಮಹಾದೇವಿಯು ಹಲವಾರು ಅವತಾರಗಳನ್ನು ತಾಳಿ ದುಷ್ಟರನ್ನು ಸಂಹರಿಸುವಳು. ಈ ಅವತಾರಗಳಲ್ಲಿ ಕಾಳಿಯ ಅವತಾರವೂ ಒಂದು. ಕಾಳಿಯ ಅವತಾರದಲ್ಲಿ ಆದಿಪರಾಶಕ್ತಿಯು ಹತ್ತು ರೂಪಗಳನ್ನು ತಾಳುತ್ತಾಳೆ. ಈ ಅವತಾರಗಳು 'ದಶ ಮಹಾವಿದ್ಯಾ' ಎಂದು ಕರೆಯಲ್ಪಡುತ್ತವೆ. ಇದು ದೇವಿಯ ಸಚ್ಚಿದಾನಂದ ಸ್ವರೂಪವನ್ನು ಮತ್ತು ಪ್ರಚಂಡ ಶಕ್ತಿಯನ್ನು ನಿರೂಪಿಸುತ್ತದೆ. ಮಹಾಕಾಳಿಯನ್ನು 'ಆದಿಶಕ್ತಿ' ಅಥವಾ 'ಕುಂಡಲಿನಿ ಶಕ್ತಿ' ಎಂದೂ ಕರೆಯುವರು.

**ಕಾಳಿ ಮಾತೆಯ ಹತ್ತು ಅವತಾರಗಳು ಹೀಗಿವೆ:**

1. **ಕಾಳಿ** - ದಶಮಹಾ ವಿದ್ಯೆಗಳಲ್ಲಿ ಮೊದಲನೆಯ ಸ್ಥಾನದಲ್ಲಿರುವ ಕಾಳಿ ಎಲ್ಲರಿಗಿಂತ ಅತಿ ಮುಖ್ಯಳಾದ ದೇವತೆ. "ಕಾಳಿ" ಎನ್ನುವ ಹೆಸರು ಸಂಸ್ಕೃತದ 'ಕಾಲ' -ಎನ್ನುವ ಪದದಿಂದ ಉದ್ಭವವಾಗಿದೆ - ಎಂದರೆ 'ಕಪ್ಪು', 'ಕಾಲ', 'ವಿನಾಶ'. ಈಕೆಯು ದಕ್ಷಿಣಾಭಿಮುಖವಾಗಿರುವುದರಿಂದ 'ದಕ್ಷಿಣಕಾಳಿ', ಚಂಡಮುಂಡರೆನ್ನುವ ರಾಕ್ಷಸರನ್ನು ವಧಿಸಿದ್ದರಿಂದ ಚಾಮುಂಡಿ ಎಂದೂ ಕರೆಯುವರು. ಉಜ್ಜಯಿನಿಯಲ್ಲಿ ಈಕೆಗೆ ಸಂಬಂಧಿಸಿದ ದೇವಾಲಯವೂ ಮತ್ತು ಶಕ್ತಿಪೀಠವೂ ಇದೆ. ಮೂಲ ದೇವಸ್ಥಾನವು ಪಶ್ಚಿಮ ಬಂಗಾಳದ ಕಲ್ಕತ್ತಾ ನಗರದಲ್ಲಿದೆ. ಇವಳನ್ನು 'ಕಾಲಭಕ್ಷಕಿ' ಎಂದು ವರ್ಣಿಸಲಾಗಿದೆ. ಸಚ್ಚಿದಾನಂದ ಸ್ವರೂಪಳಾದ ಈ ಮಹಾಮಾತೆಯು ಮನುಷ್ಯನಲ್ಲಿ ಮನೆ ಮಾಡಿರುವ ಎಲ್ಲಾ ರೀತಿಯ ದುರ್ಬುದ್ಧಿ ಮತ್ತು ದುಷ್ಟತನಗಳನ್ನು ನಾಶ ಮಾಡುವಳು.

2. **ತಾರಾ** - ಈ ದೇವಿಯು ಹಿಂದೂ ಧರ್ಮ ಹಾಗೂ ಬೌದ್ಧ ಧರ್ಮ ಎರಡರಲ್ಲೂ ಪೂಜಿಸಲ್ಪಡುತ್ತಾಳೆ. ಇವಳು 'ಕರುಣೆ' ಮತ್ತು 'ಅಭಯ' ಎನ್ನುವ ಎರಡು ಅಂಶಗಳನ್ನು ಪ್ರತಿನಿಧಿಸುತ್ತಾಳೆ. ತಿಳಿನೀಲಿ ಮೈಬಣ್ಣದಲ್ಲಿ ಕಾಣಿಸಿಕೊಳ್ಳುವ ತಾರಾ ದೇವಿಯು ಹುಲಿಯ ಚರ್ಮವನ್ನು ಧರಿಸಿರುತ್ತಾಳೆ. ಈ ದೇವಿಯ ಮಹಾ ಪೀಠವು ಪಶ್ಚಿಮ ಬಂಗಾಳದ ದ್ವಾರಕಾ ನದಿಯ ಬಳಿ ಮಹಾಸ್ಮಶಾನದಲ್ಲಿದೆ. ತಾರಾದೇವಿಯು ದುರ್ಜನರನ್ನು ನಾಶಮಾಡಿ ಸಜ್ಜನರನ್ನೂ ಮತ್ತು ದೈವಸಾಕ್ಷಾತ್ಕಾರದೆಡೆಗೆ ಮುನ್ನಡೆಯುತ್ತಿರುವ ಮಂದಿಯನ್ನೂ ಕಾಪಾಡುತ್ತಾಳೆ.

3. **ತ್ರಿಪುರ ಸುಂದರಿ** - ದಶ ಮಹಾವಿದ್ಯೆಯಲ್ಲಿ ಮೂರನೆಯ ಅವತಾರ ತ್ರಿಪುರಸುಂದರಿ. ಇವಳು ತ್ರಿಲೋಕಗಳಲ್ಲಿಯೂ ಅತ್ಯಂತ ಸುಂದರಳೂ, ದೋಷರಹಿತಳೂ ಆಗಿದ್ದು ಪರಿಪೂರ್ಣತೆಯೇ ಮೈವೆತ್ತಂತೆ ಇರುತ್ತಾಳೆ. ಇವಳನ್ನು ಬೇರೊಂದು ರೀತಿ ಅರ್ಥೈಸುವುದಾದರೆ ನಮ್ಮ ಸುತ್ತಮುತ್ತಲಿರುವ ಎಲ್ಲಾ ರೀತಿಯ ಸೌಂದರ್ಯವೂ ಆ ತ್ರಿಪುರಸುಂದರಿಯ ಅಂಶ ಎಂದು

ತಿಳಿಯಬಹುದು. ಇವಳು 'ತಾಂತ್ರಿಕ ಪಾರ್ವತಿ' ಮತ್ತು 'ಷೋಡಶಿ' ಎಂದೂ ಕರೆಯಲ್ಪಡುತ್ತಾಳೆ. ಈ ದೇವಿಯ ಶಕ್ತಿಪೀಠವು ತ್ರಿಪುರ ರಾಜ್ಯದ ಉದಯಪುರದ  ಮಾತಾಬರಿ ಶಿಖರದಲ್ಲಿದೆ. ಸತಿ ದೇವಿಯ ಬಲಗಾಲು ಈ ಸ್ಥಳದಲ್ಲಿ ಬಿದ್ದಿದೆ ಎನ್ನುವ ನಂಬಿಕೆ ಇದೆ.

4. **ಭುವನೇಶ್ವರಿ -** ಇಲ್ಲಿ ದೇವಿಯು ವಿಶ್ವವನ್ನೇ ಕಾಪಾಡುವ ತಾಯಿಯಾಗಿದ್ದು, 'ಮಹಾಮಾಯೆ' ಎಂದು ಕರೆಯಲ್ಪಡುತ್ತಾಳೆ. ಈಶ್ವರನ ಹೃದಯದಲ್ಲಿ ರಾರಾಜಿಸುವ ತಾಯಿ ಭುವನೇಶ್ವರಿಯ ಶಕ್ತಿಪೀಠವು  ಉತ್ತರಾಖಂಡದಲ್ಲಿದೆ. ನಾರದಗಂಗಾ ತೀರದಲ್ಲಿರುವ ಈ ದೇವಾಲಯದ  ಬಳಿ ವೇದವ್ಯಾಸರು ಶ್ರುತಿ, ಸ್ಮೃತಿಗಳನ್ನೂ ಹಾಗೂ ವೇದ ಪುರಾಣಗಳನ್ನೂ ಬರೆದರು ಎಂದು ನಂಬಲಾಗಿದೆ.

5. **ಭೈರವಿ -** ಮಹಾದೇವಿಯ ಐದನೆಯ  ಅವತಾರವನ್ನು 'ಮಹಾವೀರರ ದೇವತೆ' ಎಂದೂ , ದುರ್ಜನರ ನಾಶಕ್ಕೆ ಮುನ್ನುಡಿ ಬರೆಯುವವಳು ಎಂದೂ ಬಣ್ಣಿಸಲಾಗಿದೆ. ಇಲ್ಲಿ ಮಾತೆಯು ದುಷ್ಟರಾಕ್ಷಸರಿಂದ ತನ್ನ ಮಕ್ಕಳನ್ನು ರಕ್ಷಿಸುವಳು. ಅಂತೆಯೇ ಜನರ ಮನಸ್ಸಿನಲ್ಲಿರುವ ದುಷ್ಟತನವನ್ನು ಹಾಗೂ ಅಪನಂಬಿಕೆಯನ್ನು ನಾಶ ಮಾಡಿ ಬೆಳಕಿನೆಡೆಗೆ ಕೊಂಡೊಯ್ಯುವಳು ಎಂದು ನಂಬಿಕೆ. ಇವಳನ್ನು 'ತ್ರಿಪುರ ಭೈರವಿ', 'ಗಿರಿಜಾ ಭೈರವಿ' ಎಂದೂ ಕರೆಯಲಾಗುತ್ತದೆ. ಇವಳ ಶಕ್ತಿ ಪೀಠವು ಉಜ್ಜಯಿನಿಯ  ಶಿಪ್ರಾ ನದಿಯ ದಡದಲ್ಲಿರುವ ಭೈರವಿ ಪರ್ವತದಲ್ಲಿದೆ. ಹಾಗೆಯೇ ಗುಜರಾತಿನ ಗಿರ್ನಾರ್ ನಲ್ಲಿರುವ ಭೈರವ ಪರ್ವತದ  ಪಕ್ಕದಲ್ಲಿದೆ ಎಂದು ಹೇಳಲಾಗುತ್ತದೆ.  ಈ ಎರಡು ದೇವಸ್ಥಾನಗಳನ್ನೂ ಮಾ ಭೈರವಿ ಶಕ್ತಿಪೀಠವೆಂದು ಪರಿಗಣಿಸಲಾಗುತ್ತದೆ.

6. **ಚಿನ್ನಮಸ್ತಿಕಾ -** 'ಚಿನ್ನಮಸ್ತಿ' ಎಂದರೆ  ರುಂಡವಿಲ್ಲದೆ ಇರುವುದು. ಈ ರೂಪದಲ್ಲಿ ದೇವಿಯು ತನ್ನದೇ ಶಿರವನ್ನು ಕೈಯಲ್ಲಿ ಹಿಡಿದು ಕೊಂಡಿರುವಳು. ಇವಳು 'ಪ್ರಚಂಡ ಚಂಡಿಕಾ' ಎಂದೂ ಕರೆಯಲ್ಪಡುತ್ತಾಳೆ. ಇಂತಹ ರೌದ್ರಾವತಾರದಲ್ಲಿಯೂ ಅವಳ ಕಾಲ ಬುಡದಲ್ಲಿ 'ರಾಧಾ-ಕೃಷ್ಣ'ರ ಮೂರ್ತಿ ಇದೆ. ಇದು 'ಸೃಷ್ಟಿ-ಸ್ಥಿತಿ- ಲಯ'ಗಳ ಸಂಕೇತವಾಗಿದೆ. ಇವಳ ಶಕ್ತಿಪೀಠವು ಇರುವುದು ಜಾರ್ಖಂಡ್ ನ ರಾಮಘಡ ಪ್ರದೇಶದಲ್ಲಿ. ಇದು ಪ್ರಸಿದ್ಧ ತಾಂತ್ರಿಕ ಪೀಠವಾಗಿದೆ.

7. **ಧೂಮವತಿ -** ಇವಳನ್ನು ಮೃತ್ಯು ದೇವತೆ ಎಂದು ಪರಿಗಣಿಸಲಾಗುತ್ತದೆ. ಇಲ್ಲಿ ದೇವಿಯು ವಿಧವೆಯ ರೂಪದಲ್ಲಿ ಇರುತ್ತಾಳೆ. ಈಕೆಯನ್ನು 'ಹೊಗೆಯ ಆತ್ಮ' ಎಂದೂ ಪರಿಗಣಿಸಲಾಗುತ್ತದೆ. ಈಕೆಯನ್ನು ಶುಭ ಮತ್ತು ಸಂಪತ್ತನ್ನು ನೀಡುವ ಲಕ್ಷ್ಮಿಗೆ ವಿರುದ್ಧವಾಗಿ ಬಿಂಬಿಸಲಾಗಿದೆ. ಜನರು ಧೂಮವತಿಯನ್ನು ಪೂಜಿಸುವ ವೇಳೆ ಆಕೆಯನ್ನು ತಮ್ಮ ಮನೆಯಿಂದ ಹೊರಗೆ ಹೋಗುವಂತೆ ಪ್ರಾರ್ಥಿಸುತ್ತಾರೆ. ಈ ದೇವಿಯ ಶಕ್ತಿಪೀಠವು ಮಧ್ಯಪ್ರದೇಶದ ದತೀಯಾ ಜಿಲ್ಲೆಯ ಪೀತಾಂಬರದಲ್ಲಿದೆ. ಇವಳು ಜಗತ್ತಿನ ಮಿಥ್ಯತೆಯನ್ನು ಪ್ರತಿನಿಧಿಸುತ್ತಾಳೆ.

Sports Orthopedics Institute
1084, 18th Cross, 14th Main, Sector 3, HSR Layout, Bangalore-560102
www.sportsorthopedics.in/book-appointment
Phone: 9008520831

"One Stop Solution for all yourOrthopaedics and Sports Injuries". Keyhole Surgeries, Joint replacements, Physiotherapy & More

Dr. Naveen Kumar LV
MBBS, MS Orth, FRCS Orth (Eng), MCh Hip & Knee (UK), MSc Orth (UK), Dip SICOT (Italy), FEBOT (Portugal), MRCGP (UK), Dip FIFA SM (Switzerland), (FSEM (UK))

SOI Sports Orthopedics Institute Bengaluru

**8. ಬಾಗ್ಲಮುಖಿ -** ಈ ಅವತಾರದಲ್ಲಿ ದೇವಿಗೆ ಕೊಕ್ಕರೆಯಂತೆ ತಲೆ ಇರುತ್ತದೆ. ಇವಳು ಶತ್ರುಗಳನ್ನು ನಿಯಂತ್ರಿಸುತ್ತಾಳೆ ಮತ್ತು ಅವರನ್ನು 'ನಿಷ್ಕ್ರಿಯ ಸ್ಥಿತಿಗೆ' ತರುತ್ತಾಳೆ. ಆದ್ದರಿಂದ ಇವಳು 'ಸ್ತಂಭನಾದೇವಿ' ಎಂದೂ ಕರೆಯಲ್ಪಡುತ್ತಾಳೆ. ಈ ದೇವಿಯು ವಾಕ್ ಶಕ್ತಿಯನ್ನು(ನಾಲಗೆಯಲ್ಲಿರುವ ಶಕ್ತಿ) ಕಸಿದುಕೊಂಡು ಹಾಗೂ ಮನಸ್ಸನ್ನು ಒಂದು ನಿಶ್ಚಲ ಸ್ಥಿತಿಗೆ ತರುವುದರಿಂದ ಇವಳನ್ನು 'ಬಾಗ್ಲಮುಖಿ' ಎಂದು ಕರೆಯುವರು. 'ಬಾಗ್ಲ' ಎಂದರೆ ಕೊಕ್ಕರೆ ಜಾತಿಯ ಒಂದು ಪಕ್ಷಿ (ಹಿಂದಿಯಲ್ಲಿ). ಇವಳ ಮೈಬಣ್ಣ ಬಿಳಿಯಾಗಿರುತ್ತದೆ. ಇವಳ ಶಕ್ತಿ ಪೀಠವು ಭಾರತ ದೇಶದಲ್ಲಿ ಮೂರು ಕಡೆಗಳಲ್ಲಿವೆ. ಹಿಮಾಚಲದ ಕಾಂಗ್ರಾ ಜಿಲ್ಲೆ, ಮಧ್ಯಪ್ರದೇಶದ ದತಿಯಾ ಜಿಲ್ಲೆ ಹಾಗೂ ಮಧ್ಯಪ್ರದೇಶದ ಶಾಜಾಪುರ. ಈ ಮೂರು ದೇವಾಲಯಗಳಲ್ಲಿ ಕಾಂಗ್ರಾ ದೇವಾಲಯವು ಹೆಚ್ಚು ಪ್ರಸಿದ್ಧ.

**9. ಮಾತಂಗಿ -** ಇವಳು ತಾಂತ್ರಿಕತೆಯಲ್ಲಿ 'ಸಿದ್ಧ ವಿದ್ಯೆ'ಯನ್ನು ಪ್ರತಿನಿಧಿಸುತ್ತಾಳೆ. ಇವಳು 'ತಾಂತ್ರಿಕ ಸರಸ್ವತಿ' ಎಂದೂ ಕರೆಯಲ್ಪಡುತ್ತಾಳೆ. ಇವಳು ಸಂಗೀತ, ಸಕಲ ಕಲೆಗಳು ಹಾಗೂ ವಾಕ್ಚಾತುರ್ಯವನ್ನು ಪ್ರತಿನಿಧಿಸುತ್ತಾಳೆ. ಈಕೆಯನ್ನು 'ಚಂಡಾಲಿನಿ' ಎಂದೂ ಕರೆಯುವರು. ಚಂಡಾಲ ಎಂದರೆ 'ಅಸ್ಪೃಶ್ಯ' ಎಂದು ಅರ್ಥೈಸಲಾಗುತ್ತದೆ. ಈ ದೇವಿಯನ್ನು ಮನೆಯಲ್ಲಿಟ್ಟು ಪೂಜೆ ಮಾಡಲಾಗುವುದಿಲ್ಲ. ಮಾತಂಗಿ ಕಾಳಿಗೆ ಅರ್ಧ ತಿಂದ ಊಟ ಅಥವಾ ಹಳಸಿದ ಆಹಾರವನ್ನು ಅರ್ಪಿಸಲಾಗುತ್ತದೆ. ಈ ಶಕ್ತಿಪೀಠದ ದೇವಾಲಯವು ಮಧ್ಯಪ್ರದೇಶದ ಜಾಬುವಾ ನಗರದಲ್ಲಿದೆ ಮತ್ತು ಇವಳನ್ನು ಬ್ರಾಹ್ಮಣರ ಕುಲ ದೇವತೆ ಎಂದು ಪರಿಗಣಿಸಲಾಗುತ್ತದೆ.

**10. ಕಮಲ -** ಇವಳನ್ನು 'ತಾಂತ್ರಿಕ ಲಕ್ಷ್ಮಿ' ಎಂದು ಕರೆಯಲಾಗುತ್ತದೆ. ಸಂಪತ್ತು ಹಾಗೂ ಸಮೃದ್ಧಿಯನ್ನು ನೀಡುವ ಲಕ್ಷ್ಮೀದೇವಿಯ ಅವತಾರ ಎಂದು ಪರಿಗಣಿಸಲಾಗುತ್ತದೆ. ದಕ್ಷಿಣ ಭಾರತದಲ್ಲಿ ಕಾಳಿಯ ಈ ಅವತಾರವನ್ನು 'ಗಜಕಾಳಿ' ಎಂದು ಪೂಜಿಸುತ್ತಾರೆ. ಈಕೆಯ ಅಕ್ಕಪಕ್ಕದಲ್ಲಿ ಎರಡು ಆನೆಗಳು ವಿರಾಜಮಾನವಾಗಿವೆ. ದಶ ಮಹಾವಿದ್ಯೆಗಳಲ್ಲಿ ಇವಳು ಕೊನೆಯ ಹಾಗೂ ಹತ್ತನೆಯ ದೇವತೆ. ಭಕ್ತರಿಗೆ ವರಗಳನ್ನು ಕರುಣಿಸುವ ಕಮಲ. ಸಚ್ಚಿದಾನಂದ ಸ್ವರೂಪಳೂ ಹಾಗೂ ಅತ್ಯಂತ ಲಾವಣ್ಯವತಿಯೂ ಆಗಿರುತ್ತಾಳೆ.

ಆದಿಪರಾಶಕ್ತಿಯ ಈ 10 ಅವತಾರಗಳನ್ನು ಭಕ್ತಿಯಿಂದ ಪೂಜಿಸಿದರೆ ಸಕಲ ಇಷ್ಟಾರ್ಥಗಳೂ ನೆರವೇರುವುವು. ಹಾಗೂ ದೇವಿಯು ಮನುಷ್ಯನಲ್ಲಿ ಮನೆ ಮಾಡಿರುವ ನಕಾರಾತ್ಮಕ ಭಾವನೆಗಳನ್ನು ಹಾಗೂ ದುಷ್ಟ ಬುದ್ಧಿಯನ್ನು ತೊಡೆದುಹಾಕಿ ಭಕ್ತರನ್ನು ಕತ್ತಲಿನಿಂದ ಬೆಳಕಿನೆಡೆಗೆ ಕೊಂಡೊಯ್ಯುವಳು.

— ಶ್ರೀಮತಿ ಉಷಾ ಅಯ್ಯರ್



Dr S. NADIG

MBBS, DIPLOMA (Cosmetology),MD( Dermatology),FGAD( Aesthetics- Dubai)
Dermatologist & Aestheties practitioner.
Skin & Hair Specialist, Lasers, Anti-Aging theraphy.

Mobile : 8431013653
Mail : dermasharad@gmail.com

Address :
Greenview Medical Center , HSR Layout , Bangalore
Livglam Center, jayanagar

# ರಾಮನಾಮ ಮತ್ತು ರಾಮನವಮಿ


ಶ್ರೀ ಬ್ರಹ್ಮ ಚೈತನ್ಯ ಮಹಾರಾಜ ಗೋಂದಾವಲೇಕರ, ಅವರು ಶ್ರೀ ರಾಮನವಮಿಯ ಬಗ್ಗೆ ನೀಡಿದ ಪ್ರವಚನ ಅದ್ಭುತವಾಗಿದೆ. ಅವರು ರಾಮ ನವಮಿಯನ್ನು ಭಕ್ತಿ ಭಾವ ಪೂರ್ವಕ, ಅತ್ಯುತ್ತಮ ಆದರ್ಶಗಳೊಂದಿಗೆ ಹೇಗೆ ಆಚರಿಸಬೇಕೆಂಬುದನ್ನು ವಿವರಿಸಿದ್ದಾರೆ. ಅದರ ಸಾರಾಂಶ ಹೀಗಿದೆ.

"ನಾವು ರಾಮನವಮಿಯನ್ನು ಆಚರಿಸುವಾಗ ಗಮನದಲ್ಲಿಟ್ಟುಕೊಳ್ಳಬೇಕಾದ ಸಂಗತಿ ಏನೆಂದರೆ, ರಾಮನಲ್ಲಿ ಭಕ್ತಿ ಭಾವ ಬೆಳೆಯಬೇಕು. ರಾಮ ನಾಮದ ವಿಷಯದಲ್ಲಿ ಪ್ರೇಮ ಉತ್ಪನ್ನವಾಗಬೇಕು ಹಾಗೂ ಅನ್ಯೋನ್ಯರಲ್ಲಿ ಆತ್ಮೀಯತೆ ಉಂಟಾಗುವ ರೀತಿಯಲ್ಲಿ ಅದನ್ನು ಆಚರಿಸಬೇಕು. ಪ್ರತಿಯೊಬ್ಬ ಮನುಷ್ಯನಿಗೂ ತನ್ನ ವೈಯಕ್ತಿಕ ಜೀವನದಲ್ಲಿ ಆಚರಣೆಯಲ್ಲಿ ತರಲು ಯೋಗ್ಯವಾದದ್ದು ಶ್ರೀರಾಮನ ಚರಿತ್ರೆ ಆಗಿರುತ್ತದೆ.

ಶ್ರೀ ರಾಮನ ಮಾತೃ ಪಿತೃ ಭಕ್ತಿ ,ಏಕಪತ್ನಿವ್ರತ ,ಬಂಧುಪ್ರೇಮ, ಸಹಿಷ್ಣುತೆ, ನಿರ್ಲೋಭತ್ವ, ಅತ್ಯಂತ ಪ್ರೇಮದ ಸ್ವಭಾವ, ಶೌರ್ಯ ಹಾಗೂ ಸತ್ಯನಿಷ್ಠೆಯು ನಮಗೆ ಇಂದಿಗೂ ಆದರ್ಶಪ್ರಾಯವಾಗಿವೆ. ರಾಮ ಚರಿತ್ರೆಯ ಮಹತ್ವದ ಭಾಗವು ಭಕ್ತ ಚರಿತ್ರೆಯಾಗಿರುತ್ತದೆ.

ಭರತ, ಲಕ್ಷ್ಮಣ, ಹನುಮಂತ ಮುಂತಾದ ರಾಮ ಭಕ್ತರ ಚರಿತ್ರೆಯನ್ನು ಓದಬೇಕು. ರಾಮಾಯಣದಲ್ಲಿ ಭರತನ ಭಕ್ತಿಯು ಅಪೂರ್ವವಾಗಿರುತ್ತದೆ. ರಾಮನಿಂದ ಪಾದುಕೆ ಪಡೆದು ಆ ಪಾದುಕೆಗಳನ್ನು ಸಾಕ್ಷಿಯಾಗಿಟ್ಟು ಕರ್ತೃತ್ವ ಭಾವದಿಂದ 14 ವರುಷ ರಾಜ್ಯವಾಳಿದನು. ಅದರಂತೆ ನಾವು ಈ ಪ್ರಪಂಚದಲ್ಲಿ ಕರ್ತೃತ್ವ ಭಾವದಿಂದ ವ್ಯವಹರಿಸಿದರೆ ಎಷ್ಟು ಆನಂದವಾಗುತ್ತದೆ. ಈ ಪ್ರಪಂಚವು ಪರಮಾತ್ಮನದ್ದು ನಾವು ನಮ್ಮ ಕರ್ತವ್ಯವನ್ನು ಆತನ ಆಣತಿಯಂತೆ ನಿರ್ವಹಿಸುತ್ತಿದ್ದೇವೆ ಎಂದುಕೊಂಡಾಗ ನಮಗೆ ನೋವುಂಟಾಗುವುದಿಲ್ಲ ಕಾರ್ಯ ಸಿದ್ಧಿಯೂ ಆಗುತ್ತದೆ. ಆಗುವುದೆಲ್ಲವೂ ಭಗವಂತನ ಇಚ್ಛೆಯಿಂದಲೇ ಆಗುತ್ತದೆ ಎಂಬ ಭಾವನೆ ನಮ್ಮಲ್ಲಿ ಉದ್ಭವಿಸಿದಾಗ ಉಂಟಾಗುವುದೇ ಪರಮಾರ್ಥದ ಮೊದಲನೆಯ ಮೆಟ್ಟಿಲು.

ರಾಮನಾಮಕ್ಕೆ ಅತ್ಯಮೋಘ ಶಕ್ತಿಯಿದೆ. ಹಾಗಾಗಿ ನಾವೆಲ್ಲರೂ ರಾಮನ ಧ್ಯಾನ ಮಾಡಬೇಕು. ದಶರಥನಿಗೆ ಕೊನೆಯ ಕಾಲದಲ್ಲಿ ರಾಮನ ವಿರಹ ಉಂಟಾಯಿತು. 'ರಾಮ ರಾಮ 'ಎನ್ನುತ್ತಾ ಪ್ರಾಣಬಿಟ್ಟನು. ಅವನಿಗೆ ಸದ್ಗತಿ ಪ್ರಾಪ್ತವಾಯಿತು. ಜಟಾಯುವಿಗೆ ಮೃತ್ಯುವಿನ ಸಮಯದಲ್ಲಿ ರಾಮನ ದರ್ಶನವಾದ್ದರಿಂದ ಆನಂದವಾಯಿತು. ಅವನು ರಾಮನನ್ನು ನೋಡುತ್ತಾ 'ರಾಮ ರಾಮ' ಎನ್ನುತ್ತಾ ಪ್ರಾಣ ಬಿಟ್ಟನು. ಮಾರೀಚನಿಗೆ ರಾವಣನು "ನೀನು ಸುವರ್ಣ ಮೃಗವಾಗಿ ರಾಮ ಲಕ್ಷ್ಮಣರನ್ನು ಸೀತೆಯಿಂದ ದೂರ ತೆಗೆದುಕೊಂಡು ಹೋಗು. ಆಗ ನಾನು ಸೀತೆಯ ಹರಣ ಮಾಡುತ್ತೇನೆ" ಎಂದನು. ಮಾರೀಚನು ಮೊದಲು ಈ ಮಾತಿಗೆ ಒಪ್ಪಲಿಲ್ಲ. ಆಗ ರಾವಣನು "ನೀನು ನನ್ನ ಮಾತು ಕೇಳದಿದ್ದರೆ ನಾನು ನಿನ್ನನ್ನು ಕೊಂದುಬಿಡುವೆನು" ಎಂದನು. ಆಗ ಮಾರೀಚನು ತನ್ನ ಮನಸ್ಸಿನಲ್ಲಿ, 'ರಾವಣನ ಕೈಯಿಂದ

With Best Compliments From
Viprayan Grindtek Pvt. Ltd. Bengaluru
Manufacturers of Speciality Grinding Wheels
Contact: email : info@viprablr.com
VIPRAYAN GRINDTEK
Mobile:
9845040755
9980945373


ಸಾಯುವುದಕ್ಕಿಂತಲೂ ರಾಮನ ಕೈಯಿಂದ ಸಾಯುವುದರಲ್ಲಿ ಕೆಡುಕೇನಿದೆ?' ಎಂದು ಕೊಂಡನು. ಶ್ರೀ ರಾಮ ನನ್ನ ನೋಡುತ್ತಾ, ನೋಡುತ್ತಾ ಅವನು ಪ್ರಾಣ ಬಿಟ್ಟನು. ರಾಮನು ಅವನನ್ನು ತನ್ನ ಆತ್ಮಸ್ವರೂಪದಲ್ಲಿ ಸೇರಿಸಿಕೊಂಡನು.

ಹಾಗೆಯೇ ಮಂಡೋದರಿಯು ರಾವಣನಿಗೆ, "ಮಹಾರಾಜ ನೀವು ಬಹಳ ದೊಡ್ಡ ಅಪರಾಧ ಮಾಡುತ್ತಿರುವಿರಿ, ಕೃಪೆಮಾಡಿ, ರಾಮನ ಸೀತೆಯನ್ನು ಅವನಿಗೆ ಕೊಟ್ಟುಬಿಡಿ" ಎಂದು ಬಹಳ ಉಪದೇಶ ಮಾಡಿದಳು. ಇದರಿಂದ ರಾವಣನ ಮನಸ್ಸು ವಿಚಲಿತವಾಯಿತು. ಅವನ ಮನಸ್ಸಿನಲ್ಲಿ ಸಾತ್ವಿಕ ಭಾವ ಜಾಗೃತವಾಯಿತು. ರಾವಣನಿಗೆ ಸೀತೆಯನ್ನು ಕೊಟ್ಟುಬಿಡಬೇಕೆಂದು ಅನಿಸಿತು.

ಅಷ್ಟರಲ್ಲಿಯೇ ನಾರದರು ಬಂದು ರಾವಣನಿಗೆ,

"ನೀನು ಸೀತೆಯನ್ನು ಕಳುಹಿಸಬೇಡ ಅವಳನ್ನು ಕಳುಹಿಸಿದರೆ ರಾಮನ ಕೈಯಿಂದ ಸಾಯುವ ಭಾಗ್ಯ ನಿನಗೆ ಪ್ರಾಪ್ತವಾಗಲಾರದು" ಎಂದು ಹೇಳಲು ರಾವಣನು ರಾಮನ ಕೈಯಿಂದ ಸಾಯುವುದನ್ನು ಸ್ವೀಕರಿಸಿದನು. ಹಾಗೂ ರಾಮನನ್ನು ನೋಡುತ್ತಲೇ ಪ್ರಾಣ ಬಿಟ್ಟನು. ಈ ರೀತಿ ರಾಮನು ಶತ್ರುಗಳನ್ನು ಕೊಂದನು. ಆದರೂ, ಅವರನ್ನು ಮರಣದಲ್ಲಿ ಉದ್ಧಾರ ಮಾಡಿದನು. ಆದ್ದರಿಂದ ರಾಮನ ಕೋಪವೂ ಕೂಡ ಕಲ್ಯಾಣಕರವೇ ಆಗಿದೆ.

ಶಿಷ್ಟರ ಸಂರಕ್ಷಣೆ ಮಾಡುವುದಕ್ಕೋಸ್ಕರ ಭಗವಂತನು ಅವತರಿಸಿರುತ್ತಾನೆ. ಈ ತತ್ವವನ್ನು ನಾವು ತಿಳಿದುಕೊಳ್ಳಬೇಕು. ರಾಮನು ದೇವರ ಮನೆಯಲ್ಲಾಗಲಿ ಅಥವಾ ಮಂದಿರಗಳಲ್ಲಿ ಮಾತ್ರ ಇರುವುದಿಲ್ಲ. ಅವನು ಪ್ರತಿಯೊಬ್ಬರ ಹೃದಯದಲ್ಲಿರುತ್ತಾನೆ ಎಂಬುದನ್ನು ತಿಳಿದುಕೊಂಡು ಅದರಂತೆ ವ್ಯವಹರಿಸಬೇಕು. ಆದರೆ ವಿಚಾರ ತಿಳಿದಿದ್ದರೂ ಕಣ್ಣಿದ್ದರೂ, ಅದು ಅರ್ಥವಾಗುವುದಿಲ್ಲ, ಕಣ್ಣಿಗೆ ಕಾಣಿಸುವುದೂ ಇಲ್ಲ. ಏಕೆಂದರೆ ಅವುಗಳ ಮೇಲೆ ವಿಕಾರಗಳ ಪರದೆ ಬಂದಿರುತ್ತದೆ. ಕಣ್ಣುಗಳ ಮೇಲೆ ಪರದೆ ಬಂದರೆ ವೈದ್ಯರು ಚಿಕಿತ್ಸೆ ಮಾಡಿ ಔಷಧಿಗಳನ್ನು ನೀಡಿ ದೂರ ಮಾಡುತ್ತಾರೆ .ಹಾಗೆಯೇ ನಮ್ಮಲ್ಲಿರುವ ವಿಕಾರಗಳನ್ನು ದೂರಮಾಡಬೇಕಾದರೆ ನಾವು ನೀತಿ ಧರ್ಮದ ಆಚರಣೆಯೊಂದಿಗೆ ಸಾಧು ಸಂತರು ಹೇಳಿದ ಮಾರ್ಗದಲ್ಲಿ ರಾಮ ನಾಮಜಪವನ್ನು ಅತ್ಯಂತ ಭಕ್ತಿಯಿಂದ ಮಾಡುತ್ತಾ, ನಮ್ಮ ಅಂತಃಕರಣದಲ್ಲಿ ಜಪವನ್ನು ಬೀಜದ ರೂಪದಲ್ಲಿ ಬಿತ್ತಬೇಕು.

ಪ್ರತಿಯೊಂದು ವರ್ಷದ ರಾಮನವಮಿಯೊಂದಿಗೆ ರಾಮ ನಾಮದ ಸಾಧನೆಯು ಬೆಳೆದು ಅದರಿಂದ ಪ್ರಾಪ್ತವಾಗುವ ಆನಂದವು ವೃದ್ಧಿಯಾಗುವುದೇ ರಾಮನವಮಿಯ ನಿಜವಾದ ಫಲವಾಗಿರುತ್ತದೆ. ರಾಮನು ಎಲ್ಲದಕ್ಕೂ ಕರ್ತನಾಗಿರುತ್ತಾನೆ ಎಂಬ ಭಾವನೆ ದೃಢವಾಗಿ ಬೆಳೆದು ಮನಸ್ಸನ್ನು ರಾಮನಾಮ ಜಪದಲ್ಲಿ ಲೀನಗೊಳಿಸುತ್ತಾ, ಆನಂದವನ್ನು ಹೊಂದುವುದೇ ಶ್ರೀ ರಾಮನವಮಿ ಆಚರಣೆಯ ಫಲಶ್ರುತಿ ಆಗಿರುತ್ತದೆ.

**-ಬ್ರಾಹ್ಮಿ ನಟೇಶ್**

(ಆಧಾರ : ಶ್ರೀ ಬ್ರಹ್ಮಚೈತನ್ಯ ಮಹಾರಾಜ ಗೋಂದಾವಲೇಕರ ಪ್ರವಚನಗಳು)



# ಶತಾವಧಾನಿ ಪದ್ಮಭೂಷಣ ಡಾ. ಆರ್. ಗಣೇಶ್ - ವ್ಯಕ್ತಿಪರಿಚಯ



ಕನ್ನಡ ಸಾಹಿತ್ಯಲೋಕದ ಮೇರು ಪ್ರಕಾರವಾದ ಅವಧಾನ ಕಲೆ ಇಂದು ನಮ್ಮೊಂದಿಗೆ ಇದೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳಬೇಕಾದರೆ ಅದಕ್ಕೆ ಮೂಲ ಕಾರಣೀಭೂತರಾಗಿರುವವರು ಪದ್ಮಭೂಷಣ ಶ್ರೀ ಗಣೇಶ ಅವರು.

ಅವಧಾನ ಎಂಬುದು ಸ್ಮರಣ ಶಕ್ತಿ, ಬಾಷಾ ಪ್ರಾವೀಣ್ಯತೆ, ತರ್ಕ, ಸೃಜನಶೀಲತೆ, ಛಂದೋಬದ್ಧತೆ ಮತ್ತು ಆಶು ಕವನದ ಸಂಗಮ. ಒಂದೇ ಸಮಯದಲ್ಲಿ ನೂರಾರು ಪ್ರಶ್ನೆಗಳಿಗೆ ಉತ್ತರಿಸುತ್ತಾ ಛಂದಸ್ಸು, ಅರ್ಥ ಅಲಂಕಾರಗಳೊಂದಿಗೆ ಕಾವ್ಯ ರಚಿಸುವ ಅಪೂರ್ವ ಸಾಮರ್ಥ್ಯ ಹೊಂದಿರಬೇಕಾಗುತ್ತದೆ. ಒಂದು ರೀತಿಯಲ್ಲಿ 'ಸೂಪರ್ ಕಂಪ್ಯೂಟರ್' ಮಾಡುವಂತಹ ಕೆಲಸವನ್ನು ಶ್ರೀ ಗಣೇಶ ಅವರು ಲೀಲಾಜಾಲವಾಗಿ ಮಾಡುತ್ತಾರೆ.

ಅಷ್ಟಾವಧಾನವಿರಬಹುದು ಅಥವಾ ಶತಾವಧಾನವಿರಬಹುದು ಎಲ್ಲದರಲ್ಲಿಯೂ ಆಳವಾದ ಅಧ್ಯಯನವನ್ನು ಮಾಡಿ ಆಚರಣೆಗೆ ತಂದು ಮುಂದುವರಿಸಿಕೊಂಡು ಹೋಗುತ್ತಿರುವ ಈ ಮಹಾನ್ ವ್ಯಕ್ತಿಗೆ ಸಂದಿರುವ ಭಾರತ ಸರ್ಕಾರದ " ಪದ್ಮಭೂಷಣ " ಪ್ರಶಸ್ತಿಯು ಅವರ ಮೇರು ಪ್ರತಿಭೆಗೆ ಹಾಗೂ ವಿಶಿಷ್ಟ ಸಾಧನೆಗೆ ಸಂದಿರುವ ಅತಿ ವಿಶಿಷ್ಟ ಗೌರವವಾಗಿದೆ.

ಕರ್ನಾಟಕದ ಕೋಲಾರದಲ್ಲಿ ೧೯೬೨ ರಲ್ಲಿ ತಂದೆ ಶಂಕರನಾರಾಯಣ ಅಯ್ಯರ್ ಮತ್ತು ತಾಯಿ ಅಲಮೇಲಮ್ಮ ಅವರ ಸುಪುತ್ರರಾಗಿ ಜನಿಸಿದ ಇವರು ಬಿ.ಇ., ಎಂ.ಇ. (ಮೆಟಲರ್ಜಿ - ಭಾರತೀಯ ವಿಜ್ಞಾನ ಸಂಸ್ಥೆ) , ಎಂ.ಎ.(ಸಂಸ್ಕೃತ) ಮತ್ತು ಅವಧಾನ ಕಲೆಯಲ್ಲಿ ಡಿ.ಲಿಟ್. ಪದವಿ ಹೊಂದಿದ್ದಾರೆ. ಹಲವು ಸಂಸ್ಥೆಗಳಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡುವುದರ ಜೊತೆಜೊತೆಗೇ ಸಾಹಿತ್ಯಕೃಷಿಯನ್ನೂ ಮಾಡಿ ಇಂದು ಈ ಮಟ್ಟವನ್ನು ತಲುಪಿದ್ದಾರೆ. ಕಾಲೇಜಿನ ದಿನಗಳಲ್ಲಿಯೇ ನಾಟಕಗಳು, ಕಾವ್ಯ, ಕಥೆ ಇವುಗಳನ್ನೆಲ್ಲ ಬರೆಯುತ್ತಿದ್ದ ಇವರು ಅಂದಿನ ದಿನಗಳಲ್ಲಿ ಸಂಗೀತವನ್ನು ಕಲಿತು, ನೃತ್ಯವನ್ನು ಅಭ್ಯಸಿಸಿ ಸಾಹಿತ್ಯದ ಮತ್ತು ಕಲೆಗಳ ವಿವಿಧ ಪ್ರಕಾರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು.

ವಿದ್ಯಾರ್ಥಿಯಾಗಿದ್ದಾಗಲೇ ತಮ್ಮ ೧೯ ನೇ ವರ್ಷದಲ್ಲಿ ಅವಧಾನ ಕಲೆಯನ್ನು ಯಾವುದೇ ಪೂರ್ವತಯಾರಿ ಇಲ್ಲದೆ ಪ್ರದರ್ಶಿಸಿದ್ದರು. ಸರಸ್ವತಿ ಮಾತೆಯ ಮಾನಸಪುತ್ರ ಎನಿಸಿಕೊಂಡಿರುವ ಅವರು ಅಲ್ಲಿಂದ ಮುಂದೆ ಅವರ ಅವಧಾನಗಳ ಸರಣಿಯನ್ನು ಮುಂದುವರೆಸಿಕೊಂಡು ಹೋಗುತ್ತಲೆ ಇದ್ದಾರೆ. ಈಗಾಗಲೇ, ಸುಮಾರು ೧೨೦೦ ಕ್ಕೂ ಹೆಚ್ಚು ಅಷ್ಟಾವಧಾನಗಳನ್ನೂ, ಸುಮಾರು ಎಂಟಕ್ಕೂ ಹೆಚ್ಚು ಶತಾವಧಾನ ಪ್ರದರ್ಶನಗಳನ್ನೂ ನೀಡಿರುವ ಹಿರಿಮೆ ಶತಾವಧಾನಿ ಗಣೇಶ್ ಅವರದ್ದು. ಒಂದೇ ದಿನದಲ್ಲಿ ಶತಾವಧಾನವನ್ನು ಪೂರ್ಣಗೊಳಿಸಿ ಒಂದು ರೀತಿಯಲ್ಲಿ ಶತಾವಧಾನದ ತ್ರಿವಿಕ್ರಮ ಎನಿಸಿಕೊಂಡಿದ್ದಾರೆ. ಭಾರತದ ಸಂಸ್ಕೃತಿ ಮತ್ತು ಸಂಪ್ರದಾಯಗಳ ಬಗ್ಗೆ ೧೫೦೦೦ ಗಂಟೆಗಳಿಗೂ ಹೆಚ್ಚಿನ ಉಪನ್ಯಾಸವನ್ನು ನೀಡಿದ್ದಾರೆ.

ಅವರಿಗೆ ಸಂದಿರುವ ಪ್ರಶಸ್ತಿಗಳು ಎಣಿಕೆಗೆ ಬಾರದಷ್ಟು. ಅದರಲ್ಲಿ ಪ್ರಮುಖವಾದವು ಬಾದರಾಯಣ-ವ್ಯಾಸ ಪುರಸ್ಕಾರ,

Nagaraj
M: 9845191648

Pratap
M : 9742142281

STANDARD PRINTERS

Multi Colour Offset Prints

No. 22, 6th Cross, Rangappa Road, Kamakya Layout,
BSK 3rd Stage, 5th Block, Bangalore - 560 085

ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪ್ರಶಸ್ತಿ, ಭಾಷಾಂತರಕ್ಕಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ಇತ್ತೀಚೆಗೆ ಬಂದಿರುವ ಪದ್ಮಭೂಷಣ. ತನ್ನ ೨೬ ನೇ ವಯಸ್ಸಿನಲ್ಲಿಯೇ ೧೯೯೨ ರಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ ಅತ್ಯಂತ ಕಿರಿಯ ಪುರಸ್ಕೃತರು ಶ್ರೀ ಗಣೇಶ ಅವರು.

ಇನ್ನೊಂದು ಅಚ್ಚರಿಯ ವಿಶೇಷವೆಂದರೆ, ಡಾ.ಗಣೇಶ ಅವರ ಭಾಷಾ ಪ್ರಾವೀಣ್ಯತೆ. ಸುಮಾರು ೧೫ ಭಾಷೆಗಳಲ್ಲಿ ಮಾತನಾಡಬಲ್ಲರು. ಎಂಟು ಭಾಷೆಗಳಲ್ಲಿ ಕಾವ್ಯ ರಚಿಸಬಲ್ಲರು. ಭಾರತೀಯ ಭಾಷೆಗಳಲ್ಲದೆ ಇಂಗ್ಲಿಷ್, ಪ್ರಾಕೃತ, ಪಾಲಿ, ಗ್ರೀಕ್, ಲ್ಯಾಟಿನ್ ಮತ್ತು ಇಟಾಲಿಯನ್ ಭಾಷೆಗಳನ್ನೂ ಬಲ್ಲರು.

ಕನ್ನಡದಲ್ಲಿ ಲುಪ್ತಾವಸ್ಥೆಗೆ ಬಂದಿದ್ದ ಅವಧಾನ ಕಲೆಯನ್ನು ಮತ್ತೆ ಪುನರುಜ್ಜೀವನಗೊಳಿಸಿರುವುದು ಮತ್ತು ಅದನ್ನು ಉಚ್ಛ್ರಾಯ ಮಟ್ಟಕ್ಕೆ ತೆಗೆದುಕೊಂಡು ಹೋಗಿರುವುದು ಅವರ ಹೆಗ್ಗಳಿಕೆ. ಅವಧಾನ ಪ್ರಕಾರಗಳಲ್ಲಿಯೂ ಕೂಡ ಬಹಳಷ್ಟು ಬದಲಾವಣೆಗಳನ್ನು ತಂದಿದ್ದಾರೆ. ಭಾರತೀಯ ಸಂಸ್ಕೃತಿ, ವಿಜ್ಞಾನ, ಅಧ್ಯಾತ್ಮ, ವ್ಯಾಕರಣ, ಧರ್ಮಶಾಸ್ತ್ರ, ಸುಮಾರಾಗಿ ಸಾಹಿತ್ಯ, ಕ್ರೀಡೆ, ಪದ್ಯರಚನೆ, ಜೊತೆಗೆ ಪದ್ಯಗಳ ಸ್ವಾರಸ್ಯ, ಸಭಾರಂಜನೆ ಇವೆಲ್ಲವೂ ಇರುವ ಅವಧಾನ ಕಲೆಯಲ್ಲಿ ಅದಕ್ಕೂ ಹೆಚ್ಚಾಗಿ ಕೆಲವು ವಿಚಾರಗಳನ್ನು ಸೇರ್ಪಡೆ ಮಾಡಿರುವುದು ಶ್ರೀ ಗಣೇಶ್ ಅವರು ಅವಧಾನ ಕಲೆಗೆ ಕೊಟ್ಟಂತಹ ಮಹತ್ತರ ಕೊಡುಗೆ. ಅದರಲ್ಲಿ ಮುಖ್ಯವಾಗಿ ಕಾವ್ಯ, ಚಿತ್ರ, ಗೀತಾ, ನೃತ್ಯ, ನಾಟಕ ಮತ್ತು ಸೋಲೋ ಯಕ್ಷಗಾನಗಳನ್ನೂ ತಮ್ಮ ಅವಧಾನ ಪ್ರದರ್ಶನಗಳಲ್ಲಿ ಬಳಸಿಕೊಂಡಿದ್ದಾರೆ.

ಕನ್ನಡ ಕಲೆಗೆ, ಸಾಹಿತ್ಯಕ್ಕೆ ಗಣೇಶ್ ಅವರಿಂದ ದೊರೆತ ಕೊಡುಗೆಗಳು ಅಪಾರ. ಏಕವ್ಯಕ್ತಿ ಯಕ್ಷಗಾನ, ತಾಳಮದ್ದಳೆ, ನೃತ್ಯ ಅಂಗಗಳಾದ ಕರಣಗಳನ್ನು ದೇಶೀಕರಣಗೊಳಿಸಿರುವುದು, ಇವೆಲ್ಲವೂ ಸಾಹಿತ್ಯಕ್ಷೇತ್ರದಲ್ಲಿ ನವ್ಯತೆಯನ್ನು ತರುವುದರಲ್ಲಿ ಗಣೇಶ ಅವರ ಸಾಧನೆ. ನೃತ್ಯ ಕಲೆಯಲ್ಲಿ ಅಷ್ಟ ನಾಯಕ ನಾಯಕಿಯರ ಕಲ್ಪನೆ ಮತ್ತು ಶಾಸ್ತ್ರೀಯ ಸಂಗೀತದಲ್ಲಿ ಹೊಸ ರಾಗಗಳ ಸೃಷ್ಟಿ, ಮಹಾಭಾರತಕ್ಕೆ ಒಂದು ರಾಗಮಾಲಿಕೆಯನ್ನು, ರಾಮಾಯಣಕ್ಕೆ ಒಂದು ಗೀತರಾಮಾಯಣವನ್ನು ಮಾಡಿರುವುದು ಅವರ ಅಪ್ರತಿಮ ಪ್ರತಿಭೆಯನ್ನು ತೋರಿಸುತ್ತದೆ. ಭಾರತೀಯ ವಿಜ್ಞಾನ ತಂತ್ರಜ್ಞಾನ, ಸೌಂದರ್ಯ ಮೀಮಾಂಸೆ, ಮೌಲ್ಯ ಮೀಮಾಂಸೆ ಗಳಲ್ಲಿ ಅಪೂರ್ವ ಸಾಧನೆ ಮಾಡಿದ್ದಾರೆ.

ಸುಮಾರು ೬೦ ಕ್ಕೂ ಹೆಚ್ಚು ಕೃತಿಗಳನ್ನು, ಗ್ರಂಥಗಳನ್ನು ಶ್ರೀ ಗಣೇಶ್ ಅವರು ರಚಿಸಿದ್ದಾರೆ. ಕನ್ನಡದಲ್ಲಿ ಮಣ್ಣಿನ ಕನಸು, ಪುಟಗಳ ನಡುವಿನ ನವಿಲುಗರಿ, ಬ್ರಹ್ಮಪುರಿಯ ಭಿಕ್ಷುಕ, ಪರೋಕ್ಷ ಮತ್ತು ಧೂಮದೂತ, ಭಾರತೀಯ ಕ್ಷಾತ್ರ ಪರಂಪರೆ, ಅಭಿರುಚಿ, ಕವಿತೆಗೊಂದು ಕಥೆ, ಸಾಮಾನ್ಯ ಧರ್ಮ ಇತ್ಯಾದಿ. ಸಂಸ್ಕೃತದಲ್ಲಿ ಅನ್ವೇಷಣಂ, ಸಾಂಬಲಹರೀ, ಶಂಕರ ವಿವೇಕೀಯಂ, ಸೌಗಂಧಿಕಾ, ಶ್ರೀಕೃಷ್ಣಲಹರೀ, ಶ್ರೀಜಾಂಬಲಹರೀ, ಶೃಂಗಾರಲಹರೀ, ಪ್ರತಿಭಾ ದೂತಂ ಇತ್ಯಾದಿ. ಇಂಗ್ಲಿಷ್ ನಲ್ಲಿ 'ಯುವರ್ ಧರ್ಮ ಅಂಡ್ ಮೈನ್', ಸ್ಟೋರೀಸ್ ಬಿಹೈಂಡ್ ವರ್ಸಸ್ , 'ಕ್ಷಾತ್ರ : ದಿ ಟ್ರಡಿಷನ್ ಆಫ್ ವೇಲರ್ ಇನ್ ಇಂಡಿಯಾ' ಇತ್ಯಾದಿ ಹತ್ತು ಹಲವಾರು. ದೇವುಡು ನರಸಿಂಹ ಶಾಸ್ತ್ರೀ ಅವರ ಕನ್ನಡ ಕಾದಂಬರಿ 'ಮಹಾಬ್ರಾಹ್ಮಣ', ತೆಲುಗಿನ 'ಕವಿಸಾರ್ವಬೌಮುಡು', ಡಿ.ವಿ.ಗುಂಡಪ್ಪನವರ 'ಬೆಲೆ ಬಾಳುವ ಬರಹಗಳು' ಇತ್ಯಾದಿ ಕೃತಿಗಳನ್ನು ಸಂಸ್ಕೃತ ಭಾಷೆಗೆ ತರ್ಜುಮೆ ಮಾಡಿದ್ದಾರೆ.

ರಾಗಾನುರಾಗ ಎಂಬ ಸಂಗೀತ - ಸಾಹಿತ್ಯ ಸಮ್ಮಿಲನದ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಂಡು ೧೨೦ ಕ್ಕೂ ಹೆಚ್ಚು ರಾಗಗಳನ್ನು ಹೆಚ್ಚಿನ ಶ್ರೋತೃಗಳಿಗೆ ಉಣಬಡಿಸಲು ಪ್ರಯತ್ನಿಸಿದ್ದಾರೆ. ನವರಸಗಳ ರಸಸಾಗರದಲ್ಲಿ 'ಧೀರ ರಸ' ಎಂಬ ಹತ್ತನೇ ರಸವನ್ನು ಸೇರಿಸಿರುವುದು ಇವರ ಸಾಹಿತ್ಯ ಶೋಧನೆಗೆ ಹಿಡಿದಿರುವ ಕನ್ನಡಿ.

ವೈಯುಕ್ತಿಕವಾಗಿ ಅವರ ಒಂದು ದೂರದರ್ಶನ ಕಾರ್ಯಕ್ರಮದಲ್ಲಿ ಶ್ರೋತೃವಾಗಿ ಇರುವಂತಹ ಸೌಭಾಗ್ಯ ನನಗೆ ದೊರೆತಾಗ ಅವರ ನಯ, ವಿನಯ, ಇತರರ ಕುರಿತಾದ ಕಾಳಜಿ, ಭಾರತೀಯ ಸಂಸ್ಕೃತಿಯ ಬಗೆಗಿನ ಅಭಿಮಾನ, ನಮ್ಮ ನೆಲದ ಆಚರಣೆಗಳ ಕುರಿತಾದ ಗೌರವ ನನ್ನನ್ನು ಮೂಕವಿಸ್ಮಿತ-ನನ್ನಾಗಿಸಿತ್ತು. ಅವರ ಅಪಾರ ಜ್ಞಾನ ಭಂಡಾರ, ವಿಶ್ಲೇಷಣಾ ಸಾಮರ್ಥ್ಯ, ಚಿಂತನ, ವಿಚಾರ ಪ್ರತಿಪಾದನೆಯ ಲಯ, ಸರಳತೆ, ಗಂಭೀರ ವಿಚಾರ ಮಂಡನೆ, ಶ್ರೋತೃಗಳ ಪ್ರಶ್ನೆಗಳಿಗೆ ಸ್ಪಂದಿಸುವ ಪ್ರೌಢಿಮೆ ಅಬ್ಬಬ್ಬಾ ಒಂದೇ ಎರಡೇ ಎಲ್ಲವೂ ಅದ್ಭುತ!. ಅತ್ಯಮೋಘ!

ಇಂತಹ ಕನ್ನಡ ತಾಯಿಯ ಸುಪುತ್ರ ಇನ್ನಷ್ಟು ಸಾಹಿತ್ಯ ಸೇವೆಯನ್ನು, ಹೊಸ ಹೊಸ ಸಾಹಿತ್ಯಿಕ ಆವಿಷ್ಕಾರಗಳನ್ನು ಮಾಡುತ್ತಿರಲಿ, ಇನ್ನಷ್ಟು ಪ್ರಶಸ್ತಿ ಪ್ರಶಂಸೆಗಳಿಗೆ ಭಾಜನರಾಗಲಿ, ಶತಾಯುಷಿಗಳಾಗಲಿ ಎಂಬ ಹಾರೈಕೆಗಳೊಂದಿಗೆ ಅವರಿಗೆ ಅಭಿನಂದನೆಗಳು, ಅಭಿವಂದನೆಗಳು.

- ಶ್ರೀ ಶ್ರೀಧರ ರಾವ್

## ಪ್ರಕಟಣೆ

ಎಚ್.ಎಸ್.ಆರ್. ಬಡಾವಣೆ ಬ್ರಾಹ್ಮಣ ಸಂಘವು ಲೋಕಕಲ್ಯಾಣಕ್ಕಾಗಿ ನಡೆಸುವ ಸಾರ್ವಜನಿಕ ಸಾಮೂಹಿಕ ಕಾರ್ಯಕ್ರಮವಾಗಿ ಈ ವರ್ಷ ತಾರೀಕು **24 ಮೇ 2026** ರ ಭಾನುವಾರದಂದು "ಶ್ರೀ ಲಲಿತಾ ಸಹಸ್ರನಾಮ ಹೋಮ ಮತ್ತು ಪಾರಾಯಣ, ಕುಂಕುಮಾರ್ಚನೆಯನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದಲ್ಲಿ ಮಹಿಳೆಯರಿಗಾಗಿ 'ಲಲಿತಾ ಸಹಸ್ರನಾಮ ಕುಂಕುಮಾರ್ಚನೆ' ಯನ್ನು ಕೂಡ ವ್ಯವಸ್ಥೆ ಮಾಡಲಾಗಿದೆ. ಕಾರ್ಯಕ್ರಮವನ್ನು **4** ನೇ ಸೆಕ್ಟರ್ ನಲ್ಲಿರುವ 'ವೈಟ್ ಹೌಸ್ ಕಲ್ಯಾಣ ಮಂಟಪ' ದಲ್ಲಿ ನಡೆಸುವುದೆಂದು ತೀರ್ಮಾನಿಸಲಾಗಿದೆ. ಬಡಾವಣೆಯ ನಾಗರಿಕ ಬಂಧುಗಳು, ಈ ದೇವತಾ ಕಾರ್ಯದಲ್ಲಿ ನಮ್ಮ ಸಂಘದೊಂದಿಗೆ ಕೈಜೋಡಿಸಿ ಸಕ್ರಿಯವಾಗಿ ಭಾಗವಹಿಸಬೇಕು ಎಂದು ವಿನಂತಿಸಿಕೊಳ್ಳುತ್ತಿದ್ದೇವೆ.

## ಸೂಚನೆ-1

ಸಂಘವು ಸದಸ್ಯರ ಉಪಯೋಗಕ್ಕಾಗಿ ಹಲವಾರು ಯೋಜನೆಗಳನ್ನು ಮುಂದಿನ ದಿನಗಳಲ್ಲಿ ಹಮ್ಮಿಕೊಳ್ಳಲು ನಿರ್ಧರಿಸಿದೆ.ಇವುಗಳ ಉಪಲಬ್ಧಿಗಾಗಿ ಸದಸ್ಯತ್ವದ ಗುರುತಿನ ಚೀಟಿಯ (Membership card) ಅವಶ್ಯಕತೆ ಇರುತ್ತದೆ. ಆದ್ದರಿಂದ ಸಂಘವು ಎಲ್ಲಾ ಸದಸ್ಯರುಗಳಿಗೆ ಶೀಘ್ರದಲ್ಲೇ ಸದಸ್ಯತ್ವ ಸಂಖ್ಯೆ, ಹೆಸರು, ವಿಳಾಸ ಹಾಗೂ ಭಾವಚಿತ್ರ ಇವುಗಳನ್ನು ಒಳಗೊಂಡ ಸದಸ್ಯತ್ವದ ಗುರುತಿನ ಚೀಟಿಯನ್ನು ನೀಡಲು ನಿರ್ಧರಿಸಿದೆ.

**ಮುಂಬರುವ ಕಾರ್ಯಕ್ರಮಗಳು :**

- ಪ್ರದೋಷಪೂಜೆ :
  - 15/04/2026 , 29/04/2026
  - 14/05/2026 , 28/05/2026
  - 12/06/2026 , 27/06/2026
- ಬೇಸಿಗೆ ಶಿಬಿರ : 10/04/2026 - 19/04/2026
- ಶಂಕರ ಜಯಂತಿ : 21/04/26
- ರಾಮಾನುಜಾಚಾರ್ಯ ಜಯಂತಿ : 22/04/26
- ಸಾರ್ವಜನಿಕ ಕಾರ್ಯಕ್ರಮ: ಲಲಿತಾ ಸಹಸ್ರನಾಮ ಪಾರಾಯಣ & ಸಾಮೂಹಿಕ ಕುಂಕುಮಾರ್ಚನೆ - 24/05/2026
- ಮೆಂಬರ್ಶಿಪ್ ಕಾರ್ಡ್ ಹಂಚಿಕೆ

**With Best Compliments From**

*Dhoop Technologies Pvt Ltd*

Power, Electrical, Electronics, Energy,IT, and Interior Design experts

Dhoop

Mobile: +919880743953 +919972877121

Contact: sales@dhooponline.com

#1664,27th main road HSR Layout sector -2 Bangalore

## ಮಧ್ವನವಮಿ





## ಮಾಘಸ್ನಾನ








### ವಿಶೇಷ ಸೂಚನೆ

ವಿಪ್ರಬಂಧುವಿನಲ್ಲಿ ಮುದ್ರಿತವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರ ವೈಯುಕ್ತಿಕ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ-ಮುದ್ರಕರ ಅಭಿಪ್ರಾಯವಲ್ಲ. ವಿಪ್ರಬಂಧುವಿನಲ್ಲಿ ಪ್ರಕಟವಾಗುವ ಯಾವುದೇ ಜಾಹೀರಾತುಗಳಿಗೆ ಸಂಘ ಜವಾಬ್ದಾರರಾಗಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಜಾಹೀರಾತುದಾರರನ್ನೇ ಸಂಪರ್ಕಿಸಬೇಕು.

- ಸಂಪಾದಕ ಮಂಡಳಿ

# ಶಿವರಾತ್ರಿ








## ಸಂಘದ ಗಾಯತ್ರೀ ಭವನದಲ್ಲಿ ನಡೆಯುತ್ತಿರುವ ಕಾರ್ಯಕ್ರಮಗಳು.

1. ಪ್ರತೀ ಶನಿವಾರ ಹಾಗೂ ಭಾನುವಾರದಂದು ಬೆಳಿಗ್ಗೆ 6.15ರಿಂದ 7.15ರವರೆಗೆ ವೇದ ತರಗತಿಗಳು ನಡೆಯುತ್ತಿವೆ. ವೇದಬಂಧುಗಳ ಕೋರಿಕೆ ಮೇರೆಗೆ ವೇದಪಾಠದ ನಂತರ ಶ್ರೀಮದ್ಭಗವದ್ಗೀತೆಯ ಪ್ರವಚನವನ್ನು ಪ್ರಾರಂಭಿಸಿದ್ದು ವಿದ್ವಾನ್ ಶ್ರೀ ರಾಮಕೃಷ್ಣ ಭಟ್ ರವರು ಇದನ್ನು ನಡೆಸಿಕೊಡುತ್ತಿದ್ದಾರೆ..
2. ಪ್ರತೀ ಸೋಮವಾರದಿಂದ ಶುಕ್ರವಾರದವರೆಗೆ ಸಂಜೆ 5.00 ರಿಂದ 6.00ರವರೆಗೆ, ಶ್ರೀ ಪತಂಜಲಿ ಯೋಗಶಿಕ್ಷಣ ಸಮಿತಿಯ ವತಿಯಿಂದ, ಸಾರ್ವಜನಿಕರಿಗೆ ಯೋಗತರಗತಿಗಳು ನಡೆಯುತ್ತಿದ್ದು, ಯೋಗ ಗುರುಗಳಾದ ಶ್ರೀಮತಿ ಪ್ರೇಮರೆಡ್ಡಿಯವರು ಮಾರ್ಗದರ್ಶಕರಾಗಿರುತ್ತಾರೆ.
3. ಪ್ರತಿ ಪ್ರದೋಷ ದಿನದಂದು ಸಂಜೆ 5 . 3 0 ಕ್ಕೆ ಪ್ರದೋಷ ಪೂಜೆ ನಡೆಯುತ್ತದೆ. ಸೇವಾರ್ಥಿಗಳು ಕಾರ್ಯಕಾರಿಣಿಯ ಯಾವ ಸದಸ್ಯರನ್ನಾದರೂ ಸಂಪರ್ಕಿಸಬಹುದು.
4. ಪ್ರತಿ ಶನಿವಾರ ಸಂಜೆ 4.30 ರಿಂದ 5.30ರವರೆಗೆ ಕೀರ್ತನೆ ಹಾಗೂ ಭಜನಾ ತರಗತಿಗಳು, ಶ್ರೀಮತಿ ಉಷಾ ಅಯ್ಯರ್ ಹಾಗೂ ಶ್ರೀಮತಿ ದಿವ್ಯಾ ವಿನಯ್ ಇವರೀರ್ವರ ನೇತೃತ್ವದಲ್ಲಿ ನಡೆಯುತ್ತಿವೆ.

## ಬೇಸಿಗೆ ಶಿಬಿರ

2026ರ ಸಾಲಿನ ಮಕ್ಕಳ ಬೇಸಿಗೆ ಶಿಬಿರವನ್ನು ದಿನಾಂಕ 10/04/2026 ರಿಂದ 19/04/2026ರ ವರೆಗೆ ಹೆಚ್.ಎಸ್.ಆರ್ ಬಡಾವಣೆ ಬ್ರಾಹ್ಮಣ ಸಂಘದ ವತಿಯಿಂದ ಶಕುಂತಲಾ ದೇವಿ ಕಾಲೇಜಿನಲ್ಲಿ ಜರುಗಿಸಲಾಗುವುದು.

ಗುಂಪು -01 ) 8 ವರ್ಷದಿಂದ 10 ವರ್ಷದವರೆಗೆ

ಗುಂಪು -02) 11 ವರ್ಷದಿಂದ 13 ವರ್ಷದವರೆಗೆ

(ಪ್ರತೀ ಗುಂಪಿಗೆ ಗರಿಷ್ಟ 40 ಮಕ್ಕಳು ಮಾತ್ರ, ಮೊದಲು ನೋಂದಾಯಿಸಿದವರಿಗೆ ಆದ್ಯತೆ ನೀಡಲಾಗುತ್ತದೆ)

ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 12.30ರವರೆಗೆ ನಡೆಯುವ ಈ ಶಿಬಿರವು ನಾಲ್ಕು ಅವಧಿಗಳಲ್ಲಿ ನಡೆಯಲಿದ್ದು, ಶ್ಲೋಕಪಠಣ, ದೇಶಭಕ್ತಿ ಗೀತೆಗಳು, ಭಜನೆ , ಒಗಟು, ಜೋಕ್ಸ್ , ಸ್ಪರ್ಧಾತ್ಮಕ ಆಟಗಳು, ಆಶುಭಾಷಣ ಸ್ಪರ್ಧೆ, ಮೆಮೋರಿ ಟೆಸ್ಟ್ ಮೊದಲಾದ ಚಟುವಟಿಕೆಗಳನ್ನು ಒಳಗೊಂಡಿರುವುದು. ಪ್ರತಿದಿನ ಮಧ್ಯಾಹ್ನ ಉಪಾಹಾರದ ವ್ಯವಸ್ಥೆ ಇರುತ್ತದೆ.

ದಿನಾಂಕ 19/04/2026 ರ ಭಾನುವಾರದಂದು ಶಿಬಿರವು ಸಮಾರೋಪಗೊಳ್ಳಲಿದ್ದು ಮಕ್ಕಳಿಂದ ಮನರಂಜನಾ ಕಾರ್ಯಕ್ರಮ, ಸಂಘದ ಕಾರ್ಯಕ್ರಮ , ಪ್ರಶಸ್ತಿ ಪತ್ರ ಮತ್ತು ಬಹುಮಾನಗಳ ವಿತರಣೆ ಇರುವುದು.

ವಿವರಗಳಿಗಾಗಿ ಸಂಪರ್ಕಿಸಿ : -[ ] ಶ್ರೀಮತಿ ಸಿಂಧು ಪ್ರಿಯದರ್ಶಿನಿ - **9880686492**

-[ ] ಶ್ರೀಮತಿ ದಿವ್ಯಾ ವಿನಯ್ - **9611080044**

- [ ] ಶ್ರೀಮತಿ ಬ್ರಾಹ್ಮಿ ನಟೇಶ್ - **9845297704**


RADIANT SYSTEMS

**Radiant Systems**

YASKAWA

QUALITY PRODUCTS, TIMELY SERVICE

RADIANT SYSTEMS, Authorized Business Partner of YASKAWA India Pvt Ltd for Karnataka region. We deal mainly with products related to Automation and Process Industries.

1) AC Drives, Servo Motor/Drives & Robotics.
2) Panel Engineering Solutions.
3) YASKAWA Solar Pump Controller with Built In MPPT.
4) Retrofit of Existing panels & PCC/MCC Panels.




#695, 15th Cross, JP Nagar, 2nd Phase, Bangalore-560078

Mobile: +91 7760277175 Email: radiantspl@gmail.com

SME



DISTRIBUTION TRANSFORMERS

RANGE: 15 KVA - 1000 KVA
SERVICES: MANUFACTURING, REPAIR & RECONDITIONING
TYPE: CONVENTIONAL AND STAR RATED

#237, KIADB Industrial Area Phase 2, Vasanthanarasapura, Tumkur - 572128

sme_mathikere@yahoo.com

support@qualityindustries.com

QUALITY INDUSTRIES

Manufacturing excellence in DPC aluminum wires, strips, and transformer reconditioning (25–500 KVA)






MAGNA®
Centres for Obesity Diabetes and Endocrinology
Yearly Subscription Packages
SWASTHYAVRIHI
Low GI rice For Diabetes
14TH
Years of Excellence
Obesity
Thyroid
Growth Disorder
Diabetes
PCOS
Osteoporosis
Dietician
NABL Accredited Lab
Pituitary Disease
Sexual Problems
Thyroid
Diabetes
Growth Disorder & Osteoporosis
Obesity
PCOS & Sexual Problems
Dr. Anantharaman R
MBBS, MD, DM(Endo)
For Appointments: 9945953953 / 9739412608
#703, Sai Manasa Building, 1st floor, 30th Main Rd, BTM 2nd Stage, Kuvempu Nagar Bus Depot, Bengaluru - 560076
Scan the QR Code to visit our Website




KALYAN
JEWELLERS
HSR LAYOUT - No-2330, 17th Cross, 24th Main, Sector 1, Bangalore. Ph: 9900573633
FOR MORE DETAILS CONTACT US ON TOLL FREE NUMBER: 1800 425 7333 | WWW.KALYANJEWELLERS.NET | FOLLOW US ON | BUY ONLINE @ WWW.CANDERE.COM




*If undelivered, return to following address*

**H.S.R. BADAVANE BRAHMANA SANGHA (R)**

**# 56, 4th floor, Gayathri Bhavana, 31st Main, 18th Cross, Sector 2, HSR Layout, BANGALORE - 560102**

**Website : www.hsrvipra.co.in. Email : hsr.brahmana@yahoo.com**